# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 25-05-2016

**: : ಸುತ್ತೋಲೆ : :**

ವಿಷಯ: 2016-17 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ ಪ್ರವೇಶ ಪ್ರಕ್ರಿಯೆ

ಉಲ್ಲೇಖ: 1. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ-2009.
2. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು-2012.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ7(8)ಪ್ರಾಶಿಅ/ಆರ್.ಟಿ.ಇ/473/2015-16 (ಆಂಗ್ಲ ಭಾಷೆ) ದಿನಾಂಕ: 13.05.2016.
4. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ7(8)ಪ್ರಾಶಿಅ/ಆರ್.ಟಿ.ಇ/473/2015-16 (ಕನ್ನಡ ಭಾಷೆ) ದಿನಾಂಕ: 13.05.2016.
5. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ7(8)ಪ್ರಾಶಿಅ/ಆರ್.ಟಿ.ಇ/473/2015-16 ದಿನಾಂಕ: 18.05.2016 ಮತ್ತು 19.05.2016.
6.ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:23-05-2016.
7.ಪ್ರಾದೇಶಿಕ ಆಯುಕ್ತರು, ಕಲಬುರ್ಗಿ ವಿಭಾಗ ಇವರ ಪತ್ರದ ಸಂಖ್ಯೆ: REV:RCK:ADM 2016-17, dated 23-05-2016.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಕಲಬುರ್ಗಿ ವಿಭಾಗ ಇವರು ಶಿಕ್ಷಣ ಹಕ್ಕು ಕಾಯಿದೆಯಡಿ ಕೆಲವು ಮಕ್ಕಳಿಗೆ ಅವರು ವಾಸ ಮಾಡುತ್ತಿರುವ ವಾರ್ಡ್ ವ್ಯಾಪ್ತಿಯಿಂದ ಹೊರಗೆ ಇರುವ ಶಾಲೆಗಳಿಗೆ ಸೀಟು ಹಂಚಿಕೆಯಾಗಿದ್ದು ಅಂತಹ ಮಕ್ಕಳಿಗೆ ಪ್ರವೇಶ ನಿರಾಕರಿಸಲಾಗಿರುವುದನ್ನು ಉಲ್ಲೇಖ (7)ರ ಪತ್ರದಲ್ಲಿ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಅಲ್ಲದೇ ಅಂತಹ ಮಕ್ಕಳನ್ನು ಸಂಬಂಧಿಸಿದ ಶಾಲೆಗಳಲ್ಲಿ ದಾಖಲು ಮಾಡಿಸಲು ಅವಕಾಶ ಕಲ್ಪಿಸಲು ಕೋರಿರುತ್ತಾರೆ.

ವಿಷಯವನ್ನು ಪರಿಶೀಲಿಸಲಾಗಿದೆ. ದುರ್ಬಲ ವರ್ಗದ ಪೋಷಕರಿಗೆ ಮಹಾನಗರ ಪಾಲಿಕೆಗಳ ಮತ್ತು ನಗರ ಅಥವಾ ಪಟ್ಟಣ ಪ್ರದೇಶಗಳ ವಾರ್ಡ್ ವ್ಯಾಪ್ತಿಯನ್ನು ನಿಗದಿಪಡಿಸಿರುವ ಮಾಹಿತಿ ಸ್ಪಷ್ಟವಾಗಿ ಅರಿವಿಗೆ ಬಂದಿರುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಆನ್‌ಲೈನ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿರುವ ಅಂತಹ ಮಕ್ಕಳ ಭವಿಷ್ಯವನ್ನು ರೂಪಿಸಲು ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ದೃಷ್ಟಿಯಿಂದ ಸೀಟು ಹಂಚಿಕೆಯಾದ ಶಾಲೆಗಳಲ್ಲಿ ದಾಖಲಾತಿ ಮಾಡಿಸುವ ಅವಶ್ಯಕತೆ ಇದೆ.

ಸಮೀಪ ಇರುವ ವಾರ್ಡ್‌ಗಳ ಶಾಲೆಗಳಿಗೆ ಅರ್ಜಿ ಸಲ್ಲಿಸಿ ಆಯ್ಕೆಯಾಗಿರುವ ಮಕ್ಕಳ ದಾಖಲಾತಿಯನ್ನು ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಸಮಿತಿ ಪರಿಗಣಿಸಿ ಪ್ರವೇಶ ಒದಗಿಸಲು ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಅಂತಹ ಪ್ರಕರಣಗಳಿಗೆ ಉಪನಿರ್ದೇಶಕರು (ಆಡಳಿತ) ಇವರು ಜಿಲ್ಲಾ ಸಮಿತಿಯ ಅನುಮೋದನೆ ಪಡೆಯಲು ಈ ಮೂಲಕ ತಿಳಿಸಲಾಗಿದೆ.

ಆನ್‌ಲೈನ್ ಲಾಟರಿ ಪಕ್ರಿಯೆಯಲ್ಲಿ ಸೀಟು ಹಂಚಿಕೆಯಾದ ಮಕ್ಕಳನ್ನು ಸಂಬಂಧಿಸಿದ ಶಾಲೆಗಳಲ್ಲಿ ದಾಖಲು ಮಾಡಲು ನಿಗದಿಪಡಿಸಿದ್ದ ದಿನಾಂಕ 25.05.2016 ರ ಗಡುವನ್ನು ದಿನಾಂಕ: 28.05.2016 ರವರೆಗೆ ವಿಸ್ತರಿಸಲಾಗಿದೆ. ಈ ಬಗ್ಗೆ ತಂತ್ರಾಂಶದಲ್ಲಿ ಮಾಹಿತಿಯನ್ನು ಆಯಾ ದಿನವೇ ಅಪ್‌ಡೇಟ್ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

(ಡಾ॥ ಪಿ.ಸಿ.ಜಾಫರ್, ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ರವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಣಾಧಿಕಾರಿಗಳು
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
5. ಅಪರ ಆಯುಕ್ತರು, ಜಂಟಿ ನಿರ್ದೇಶಕರು, ಧಾರವಾಡ ಮತ್ತು ಗುಲ್ಬರ್ಗಾ
6. ಎಲ್ಲಾ ನಗರ ಸಭೆಗಳ ಆಯುಕ್ತರು.
7. ಎಲ್ಲಾ ಪುರ ಸಭೆ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು
8. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) , ಸಾರ್ವಜನಿಕ ಶಿಕ್ಷಣ ಇಲಾಖೆ.
9. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ

**ಪ್ರತಿಯನ್ನು:**

1. ಸರ್ಕಾರದ ಪ್ರಧಾನಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸಕಾರ, ಬಹುಮಹಡಿಗಳ ಕಟ್ಟಡ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2.ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಮಾಹಿತಿಗಾಗಿ

3.ಕಛೇರಿ ಪ್ರತಿ.